**ಕರ್ನಾಟಕ ರಕ್ಷಣಾ ವೇದಿಕೆ**

# ಕರವೇ ಒತ್ತಡಕ್ಕೆ ಮಣಿದ ಸಂಸದರ ಪ್ರತಿಭಟನೆ




ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾದವರೆಲ್ಲಾ ಕುರಿಗಳೆಂದು ಬಿಂಬಿಸಲು ಕುರಿಗಳೊಂದಿಗೆ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ನಾರಾಯಣ ಗೌಡ ನೇತೃತ್ವದ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು.



ಕಾವೇರಿ ನ್ಯಾಯಾಧಿಕರಣ ತೀರ್ಪು ಖಂಡಿಸಿ ಕರ್ನಾಟಕ ರಕ್ಷಣಾ ವೇದಿ ಕೆ ಕಾರ್ಯಕರ್ತರು ಟಿ.ಎ.ನಾರಾಯಣಗೌಡ ನೇತೃತ್ವದಲ್ಲಿ ನಗರದಲ್ಲಿರುವ ಕೇಂದ್ರ ಸಚಿವ ಕೆ.ಎಚ್.ಮುನಿಯಪ್ಪ ಅವರ ಮನೆ ಎದುರು ಧರಣಿ ನಡೆಸಿದರು.

**ಕರ್ನಾಟಕ ರಕ್ಷಣಾ ವೇದಿಕೆ**

# ರಾಜಶೇಖರನ್ ನಿವಾಸಕ್ಕೆ ಕರವೇ ಮುತ್ತಿಗೆ

ಬೆಂಗಳೂರು, ಫೆ.14: ಕಾವೇರಿ ನ್ಯಾಯಾಧಿಕರಣದ ತೀರ್ಪು ಖಂಡಿಸಿ ಸತತ ಹೋರಾಟದಲ್ಲಿ ತೊಡಗಿರುವ ಕರ್ನಾಟಕ ರಕ್ಷಣಾ ವೇದಿಕೆ ಇಂದು ಕೇಂದ್ರ ಯೋಜನಾ ಖಾತೆ ರಾಜ್ಯ ಸಚಿವ ಎಂ.ವಿ.ರಾಜಶೇಖರನ್ ನಿವಾಸದ ಮುಂದೆ ಶಾಂತಿಯುತ ಪ್ರತಿಭಟನೆ ನಡೆಸಿತು.

ಕಾವೇರಿ ತೀರ್ಪು ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುವಲ್ಲಿ ಸಂಸದರು ವಿಫಲರಾಗಿದ್ದಾರೆ ಎಂದು ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಟೀಕಿಸಿದರು. ರಾಜ್ಯದ ಎಲ್ಲಾ ಸಂಸದರು ಕೇಂದ್ರದ ಮೇಲೆ ಕಾವೇರಿ ಕುರಿತ ವಿಚಾರವಾಗಿ ಒತ್ತಡ ಹೇರುವ ಮೂಲಕ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕೆಂದು ತಿಳಿಸಿದರು.

# ಸಾಂಗ್ಲಿಯಾನ ಮನೆಗೆ ಕರವೇ ಮುತ್ತಿಗೆ



ಬೆಂಗಳೂರು, ಫೆ.20: ಕಾವೇರಿ ನ್ಯಾಯ ಮಂಡಳಿ ನೀಡಿರುವ ರಾಜ್ಯ ವಿರೋಧಿ ತೀರ್ಪನ್ನು ಖಂಡಿಸಿ ರಾಜ್ಯಕ್ಕೆ ನ್ಯಾಯ ದೊರಕಿಸಿ ಕೊಡುವಲ್ಲಿ ವಿಫಲವಾಗಿರುವ ಬೆಂಗಳೂರು ಉತ್ತರ ಲೋಕಸಭಾ ಸದಸ್ಯ ಎಚ್.ಟಿ. ಸಾಂಗ್ಲಿಯಾನ ಕೂಡಲೇ ರಾಜೀನಾಮೆ ನೀಡುವಂತೆ ಕರ್ನಾಟಕ ರಕ್ಷಣಾ ವೇದಿಕೆ ಆಗ್ರಹಿಸಿದೆ.

ಸಾಂಗ್ಲಿಯಾನ ಅವರ ನಿವಾಸಕ್ಕೆ ಮುತ್ತಿಗೆ ಹಾಕಿದ ವೇದಿಕೆಯ ನೂರಾರು ಕಾರ್ಯಕರ್ತರು ಸಾಂಗ್ಲಿಯಾನ ಸೇರಿದಂತೆ ಎಲ್ಲ ಸಂಸದರು ರಾಜೀನಾಮೆ ನೀಡುವ ಮುಖಾಂತರ ಕಾವೇರಿ ವಿಚಾರದಲ್ಲಿ ನಾಡಿನ ಹಿತ ಕಾಯಬೇಕೆಂದು ಆಗ್ರಹಿಸಿದರು.

**ಕರ್ನಾಟಕ ರಕ್ಷಣಾ ವೇದಿಕೆ**




ಕಾವೇರಿ ನ್ಯಾಯಾಧಿಕರಣ ತೀರ್ಪಿನ ವಿರುದ್ಧ ದೇವೇಗೌಡ, ಅನಂತ್‌ಕುಮಾರ್ ಸೇರಿದಂತೆ ರಾಜ್ಯದ ಸಂಸದರು ಸಂಸತ್ ಮುಂದಿನ ಗಾಂಧಿ ಪ್ರತಿಮೆಯ ಬಳಿ ಬುಧವಾರ ಪ್ರತಿಭಟನೆ ನಡೆಸಿದರು.